# ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ಮಹಾಲಕ್ಷ್ಮಿಛೇಂಬರ್ಸ್, 9/2, ಮಹಾತ್ಮಗಾಂಧಿರಸ್ತೆ,
ಬೆಂಗಳೂರು.

**ದಿನಾಂಕ: 30.03.2016**

## ಪತ್ರಿಕಾ ಪ್ರಕಟಣೆ

### 2016–17ನೇ ಸಾಲಿನ ವಿದ್ಯುಚ್ಛಕ್ತಿ ದರ ಪರಿಷ್ಕರಣೆ:

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳ ಮತ್ತು ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘದ ಆರ್ಥಿಕ ವರ್ಷ 2016–17ರ ಪರಿಷ್ಕೃತ ವಿದ್ಯುಚ್ಛಕ್ತಿ ದರಗಳನ್ನು ಅನುಮೋದಿಸಿದೆ. ಆಯೋಗವು ಮಂಗಳೂರು ವಿಶೇಷ ಆರ್ಥಿಕ ವಲಯ (**MSEZ**) ಮತ್ತು ಬೆಳಗಾವಿ ಜಿಲ್ಲೆಯ **AEQUS** ವಿಶೇಷ ಆರ್ಥಿಕ ವಲಯಗಳ (**AEQUS SEZ**) ಗ್ರಾಹಕರಿಗೆ ಅನ್ವಯವಾಗುವ ಚಿಲ್ಲರೆ ವಿದ್ಯುಚ್ಛಕ್ತಿ ದರಗಳನ್ನೂ (**Retail supply Tariff**) ಸಹ ನಿರ್ಧರಿಸಿದೆ. ಆರ್ಥಿಕ ವರ್ಷ 2017ರಲ್ಲಿ ವಿದ್ಯುತ್ ಸರಬರಾಜು ಕಂಪನಿಗಳಿಂದ ಕವಿಪ್ರನಿನಿಯು ವಸೂಲಿ ಮಾಡಬೇಕಾದ ವಿದ್ಯುಚ್ಛಕ್ತಿ ಪ್ರಸರಣ ದರಗಳನ್ನೂ ಸಹ ಪರಿಷ್ಕರಿಸಿದೆ. ಈ ಪರಿಷ್ಕೃತ ದರಗಳು ದಿನಾಂಕ:1.4.2016 ಅಥವಾ ನಂತರ ಬರುವ ಮೊದಲನೆಯ ಮೀಟರ್ ಓದುವ ದಿನಾಂಕದಿಂದ ಬಳಕೆಯಾಗುವ ವಿದ್ಯುಚ್ಛಕ್ತಿಗೆ ಅನ್ವಯವಾಗುತ್ತವೆ.

ವಿದ್ಯುತ್ ಸರಬರಾಜು ಕಂಪನಿಗಳು ಎಲ್ಲಾ ಪ್ರವರ್ಗಗಳಿಗೆ ಕೋರಿದ್ದ ಪ್ರತಿ ಯೂನಿಟ್ಟಿಗೆ 102 ಪೈಸೆಗಳ ಸಮಾನ ಸರಾಸರಿ ಏರಿಕೆಯ ಪ್ರತಿಯಾಗಿ ಆಯೋಗವು ನೀರಾವರಿ ಪಂಪ್‌ಸೆಟ್‌ಗಳು ಹಾಗೂ ಭಾಗ್ಯಜ್ಯೋತಿ/ ಕುಟೀರಜ್ಯೋತಿ ಗ್ರಾಹಕರನ್ನು ಒಳಗೊಂಡಂತೆ ವಿವಿಧ ಗ್ರಾಹಕರಿಗೆ ಪ್ರತಿ ಯೂನಿಟ್‌ಗೆ 15 ಪೈಸೆಯಿಂದ 50 ಪೈಸೆಯವರೆಗಿರುವ ಪ್ರತಿ ಯೂನಿಟ್‌ಗೆ 48 ಪೈಸೆಗಳ ಸರಾಸರಿ ವಿದ್ಯುಚ್ಛಕ್ತಿ ದರ ಏರಿಕೆಯನ್ನು ಅನುಮೋದಿಸಿರುತ್ತದೆ. ಹುಕ್ಕೇರಿ ಗ್ರಾಮೀಣ ಸಹಕಾರಿ ಸಂಘವು, ಕೋರಿದ್ದ ಪ್ರತಿ ಯೂನಿಟ್‌ಗೆ 60 ಪೈಸೆಯ ಸರಾಸರಿ ವಿದ್ಯುಚ್ಛಕ್ತಿ ದರ ಏರಿಕೆಯ ಪ್ರತಿಯಾಗಿ ಆಯೋಗವು ನೀರಾವರಿ ಪಂಪ್‌ಸೆಟ್ ಗ್ರಾಹಕರನ್ನು ಹೊರತುಪಡಿಸಿ ಎಲ್ಲಾ ಪ್ರವರ್ಗಗಳಿಗೆ ವಿದ್ಯುಚ್ಛಕ್ತಿ ದರವನ್ನು ಸರಾಸರಿ 29 ಪೈಸೆಯಂತೆ ಹೆಚ್ಚಿಸಿದೆ. ಆಯೋಗವು ಎಲ್ಲಾ ಎಲ್.ಟಿ. ಮತ್ತು ಎಚ್.ಟಿ. ಗ್ರಾಹಕರಿಗೆ ನಿಗದಿತ ಶುಲ್ಕವನ್ನು ಪ್ರತಿ ಕಿ.ವ್ಯಾ. / ಹೆಚ್.ಪಿ. / ಕೆ.ವಿ.ಎ.ಗೆ ರೂ. 5 ರಿಂದ ರೂ. 10 ರವರೆಗಿನ ಕನಿಷ್ಟ ಏರಿಕೆಯನ್ನು ಅನುಮೋದಿಸಿದೆ. ಅಸ್ತಿತ್ವದಲ್ಲಿರುವ ವಿದ್ಯುಚ್ಛಕ್ತಿ ದರಗಳಲ್ಲಿ ಸರಾಸರಿ ಶೇ.9ರಷ್ಟು ಏರಿಕೆಯಾಗಿರುತ್ತದೆ.

ಈ ಕೆಳಗಿನ ಕಾರಣಗಳಿಂದಾಗಿ ವಿದ್ಯುಚ್ಛಕ್ತಿ ದರ ಏರಿಕೆ ಮಾಡುವುದು ಅಗತ್ಯವಾಗಿದೆ:

- ವಸೂಲಿಯಾಗಬೇಕಾದ ಹಿಂದಿನ ನಿಯಂತ್ರಣ ಆಸ್ತಿ (Regulatory assest) ರೂ.1105 ಕೋಟಿಗಳಿದ್ದು, ಅದು ಪ್ರತಿ ಯೂನಿಟ್ಟಿಗೆ ಸುಮಾರು 20 ಪೈಸೆಯಷ್ಟಾಗುತ್ತದೆ.
- ಭಾರತ ಸರ್ಕಾರವು ಕಲ್ಲಿದ್ದಲಿನ ಮೇಲೆ ವಿಧಿಸಿದ ಅಧಿಕ ಸುಂಕದ ಪರಿಣಾಮವಾಗಿ, ವಿದ್ಯುತ್ ಖರೀದಿ ವೆಚ್ಚದಲ್ಲಿ ಏರಿಕೆಯು ಪ್ರತಿ ಯೂನಿಟ್ಟಿಗೆ ಸುಮಾರು 8 ಪೈಸೆಯಷ್ಟಾಗುತ್ತದೆ.
- ಶರಾವತಿ ಜಲವಿದ್ಯುತ್ ಘಟಕ ಕೆಟ್ಟು ಹೋಗಿದ್ದರ ಪರಿಣಾಮವಾಗಿ ಮಾಡಬೇಕಾದ ಹೆಚ್ಚು ದರದ ವಿದ್ಯುತ್ ಖರೀದಿಯು ಪ್ರತಿ ಯೂನಿಟ್ಟಿಗೆ ಸುಮಾರು 5 ಪೈಸೆಯಷ್ಟಾಗುತ್ತದೆ.
- ಹೊಸ ಶಾಖೋತ್ಪನ್ನ ಮೂಲಗಳ ಸೇರ್ಪಡೆಯಿಂದ ಆಗುವ ವಿದ್ಯುತ್ ಖರೀದಿ ವೆಚ್ಚದ ಏರಿಕೆ ಹಾಗೂ ಪ್ರಸರಣ ಮತ್ತು ವಿದ್ಯುತ್ ಸರಬರಾಜು ಕಂಪನಿಗಳ ಕಾರ್ಯಾಚರಣೆ ವೆಚ್ಚದಲ್ಲಿ ಏರಿಕೆಗಳು ಪ್ರತಿ ಯೂನಿಟ್ಟಿಗೆ ಸುಮಾರು 15 ಪೈಸೆಯಷ್ಟಾಗುತ್ತದೆ.

ಆಯೋಗವು, ಆರ್ಥಿಕ ವರ್ಷ 2015ರ ಎಲ್ಲಾ ಪರವಾನಿಗೆದಾರರ ವಾರ್ಷಿಕ ಕಾರ್ಯನಿರ್ವಹಣಾ ಪುನರ್ಮನನವನ್ನು ತೆಗೆದುಕೊಂಡಿದ್ದು, ಅದರಿಂದಾಗಿ, ಕೊರತೆ / ಹೆಚ್ಚಳವನ್ನು ಆರ್ಥಿಕ ವರ್ಷ 2017ರ ವಾರ್ಷಿಕ ಕಂದಾಯ ಅಗತ್ಯತೆಯಲ್ಲಿ ಸೇರಿಸಲಾಗಿದೆ.

ಆಯೋಗವು ಬಹುವರ್ಷ ವಿದ್ಯುಚ್ಛಕ್ತಿ ದರ (MYT) ವಿನಿಯಮಗಳ ಪ್ರಕಾರ ಆರ್ಥಿಕ ವರ್ಷ 2017–19ರ ನಿಯಂತ್ರಣ ಅವಧಿಯ ಪ್ರತಿ ವರ್ಷಕ್ಕೆ ವಾರ್ಷಿಕ ಕಂದಾಯ ಅಗತ್ಯತೆಯನ್ನು ನಿರ್ಧರಿಸಿದೆ. ಆಯೋಗವು, ತಾನು ನೀಡಿದ್ದ ನಿರ್ದೇಶನಗಳಿಗೆ ವಿದ್ಯುತ್ ಸರಬರಾಜು ಕಂಪನಿಗಳ ಪರಿಪಾಲನೆ ಬಗ್ಗೆ ಪುನರ್ಮನನ ಸಹಾ ನಡೆಸಿ, ಸೂಕ್ತ ನಿರ್ದೇಶನಗಳನ್ನು ನೀಡಿದೆ.

## ವಿದ್ಯುತ್ ದರ ಪರಿಷ್ಕರಣೆ ಆದೇಶ 2016ರ ಪ್ರಮುಖ ಅಂಶಗಳು:

### ಗೃಹಬಳಕೆ ಗ್ರಾಹಕರಿಗೆ ಅನ್ವಯವಾಗುವ ದರಗಳು:

**ನಗರ ಪ್ರದೇಶಗಳಲ್ಲಿನ** ಗೃಹ ಬಳಕೆಯ ಗ್ರಾಹಕರು ಬಳಸುವ ಮಾಹೆಯಾನ 30 ಯೂನಿಟ್‌ಗಳ ವಿದ್ಯುಚ್ಛಕ್ತಿಗೆ ಪ್ರತಿ ಯೂನಿಟ್‌ಗೆ ಈಗಿರುವ ದರವಾದ ರೂ. 2.70 ಅನ್ನು ರೂ. 3.00ಕ್ಕೆ ಏರಿಸಲಾಗಿದೆ ಮತ್ತು 31 ರಿಂದ 100 ಯೂನಿಟ್‌ಗಳ ಬಳಕೆಗೆ ಈಗಿರುವ ಪ್ರತಿ ಯೂನಿಟ್‌ನ ದರದಿಂದ ರೂ.4.00 ಅನ್ನು ರೂ. 4.40ಕ್ಕೆ ಏರಿಸಲಾಗಿದೆ. 101 ರಿಂದ 200 ಯೂನಿಟ್‌ಗಳವರೆಗೆ ಬಳಕೆಗೆ ಈಗಿರುವ ಪ್ರತಿ ಯೂನಿಟ್‌ನ ದರವಾದ ರೂ. 5.40 ಅನ್ನು ರೂ.5.90ಕ್ಕೆ ಹಾಗೂ 200 ಯೂನಿಟ್‌ಗಳು ಮೀರಿದ ಬಳಕೆಗೆ ಈಗಿರುವ ಪ್ರತಿ ಯೂನಿಟ್‌ನ ದರವಾದ ರೂ. 6.40 ಅನ್ನು ರೂ.6.90ಕ್ಕೆ ದರ ಏರಿಸಲಾಗಿದೆ.

**ಗ್ರಾಮಾಂತರ ಪ್ರದೇಶದ** ಗೃಹ ಬಳಕೆ ಗ್ರಾಹಕರಿಗೆ ಮೊದಲ 30 ಯೂನಿಟ್‌ಗಳ ಬಳಕೆಗೆ ಈಗಿರುವ ಪ್ರತಿ ಯೂನಿಟ್‌ನ ದರವಾದ ರೂ.2.60 ಅನ್ನು ರೂ. 2.90ಕ್ಕೆ ಹಾಗೂ 31 ರಿಂದ 100 ಯೂನಿಟ್‌ಗಳ ಬಳಕೆಗೆ ಈಗಿರುವ ಪ್ರತಿ ಯೂನಿಟ್‌ನ ದರವಾದ ರೂ.3.70 ಅನ್ನು ರೂ. 4.10ಕ್ಕೆ ಏರಿಸಲಾಗಿದೆ. 101 ರಿಂದ 200 ಯೂನಿಟ್‌ಗಳವರೆಗಿನ ಬಳಕೆಗೆ ಈಗಿರುವ ದರವಾದ ಪ್ರತಿ ಯೂನಿಟ್‌ಗೆ ರೂ. 5.10 ಅನ್ನು ರೂ. 5.60ಕ್ಕೆ ಹಾಗೂ 200 ಯೂನಿಟ್ ಮೇಲ್ಪಟ್ಟ ಹೆಚ್ಚಿನ ಬಳಕೆಗೆ ಈಗಿರುವ ದರವಾದ ಪ್ರತಿ ಯೂನಿಟ್‌ಗೆ ರೂ.5.90 ಅನ್ನು ರೂ. 6.40ಕ್ಕೆ ಏರಿಸಲಾಗಿದೆ.

## ಕೈಗಾರಿಕಾ ಬಳಕೆದಾರರಿಗೆ ಅನ್ವಯವಾಗುವ ವಿದ್ಯುಚ್ಛಕ್ತಿ ದರಗಳು:

ಎಲ್.ಟಿ. ಕೈಗಾರಿಕಾ ಬಳಕೆದಾರರ ಪ್ರವರ್ಗಗಳಿಗೆ ಅನ್ವಯವಾಗುವ ವಿದ್ಯುಚ್ಛಕ್ತಿ ದರಗಳನ್ನು ಪ್ರತಿಯೂನಿಟ್‌ಗೆ 15 ರಿಂದ 30 ಪೈಸೆಗಳಷ್ಟು ಹೆಚ್ಚಿಸಲಾಗಿದೆ. ಬೆಸ್ಕಾಂ ವ್ಯಾಪ್ತಿಯ ಬೃಹತ್ ಬೆಂಗಳೂರು ಮಹಾನಗರ ಪ್ರದೇಶ ಮತ್ತು ಬೆಸ್ಕಾಂ ವ್ಯಾಪ್ತಿಯ ಇತರೆ ನಗರಸಭೆ ಪ್ರದೇಶಗಳ ಎಲ್.ಟಿ. ಕೈಗಾರಿಕಾ ಬಳಕೆದಾರರಿಗೆ ಮೊದಲ 500 ಯೂನಿಟ್‌ಗಳ ಬಳಕೆಗೆ ಪ್ರತಿಯೂನಿಟ್‌ಗೆ ರೂ. 5.10 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.4.90) ಹಾಗೂ 500 ಯೂನಿಟ್‌ಗಳಿಗಿಂತ ಹೆಚ್ಚಿನ ಬಳಕೆಗೆ ಪ್ರತಿ ಯೂನಿಟ್‌ಗೆ ರೂ. 6.30ರಂತೆ (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ. 6.00) ದರಗಳನ್ನು ಪರಿಷ್ಕರಿಸಲಾಗಿದೆ.

ಬೆಸ್ಕಾಂ ಹೊರತು ಪಡಿಸಿ, ಇತರೆ ಎಸ್ಕಾಂಗಳ ವ್ಯಾಪ್ತಿಯಲ್ಲಿ ಬರುವ ನಗರಸಭೆ ಪ್ರದೇಶಗಳ ಎಲ್.ಟಿ. ಕೈಗಾರಿಕಾ ಬಳಕೆದಾರರ ಪ್ರವರ್ಗಗಳಿಗೆ ಅನ್ವಯವಾಗುವ ಪರಿಷ್ಕೃತ ದರಗಳು ಮೊದಲ 500 ಯೂನಿಟ್ ಬಳಕೆಗೆ ಪ್ರತಿಯೂನಿಟ್‌ಗೆ ರೂ. 4.95 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ. 4.75), 501 ಯೂನಿಟ್‌ನಿಂದ 1000 ಯೂನಿಟ್‌ಗಳವರಗೆ ಪ್ರತಿ ಯೂನಿಟ್‌ಗೆ ರೂ. 5.85 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ. 5.55) ಹಾಗೂ 1000 ಯೂನಿಟ್‌ಗಿಂತ ಮೇಲ್ಪಟ್ಟ ಬಳಕೆಗೆ ಪ್ರತಿ ಯೂನಿಟ್‌ಗೆ ರೂ. 6.15 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ. 5.85).

ಇತರೆ ಎಲ್ಲಾ ಪ್ರದೇಶಗಳಲ್ಲಿ ಹೊಸ ದರಗಳು ಮೊದಲ 500 ಯೂನಿಟ್ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.4.85 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ. 4.70), 501 ಯೂನಿಟ್‌ನಿಂದ 1000 ಯೂನಿಟ್‌ಗಳವರೆಗೆ ಪ್ರತಿ ಯೂನಿಟ್‌ಗೆ ರೂ.5.70 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ. 5.50) ಹಾಗೂ 1000 ಯೂನಿಟ್‌ಗಿಂತ ಮೇಲ್ಪಟ್ಟ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.6.00 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ. 5.80).

ಬೆಸ್ಕಾಂ ವ್ಯಾಪ್ತಿಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಬೆಸ್ಕಾಂ ವ್ಯಾಪ್ತಿಯ ಇತರೆ ನಗರಸಭೆ ಪ್ರದೇಶಗಳಲ್ಲಿನ ಹೆಚ್.ಟಿ. ಕೈಗಾರಿಕಾ ಬಳಕೆದಾರರಿಗೆ ಪ್ರತಿ ಯೂನಿಟ್‌ಗೆ 35 ರಿಂದ 45 ಪೈಸೆಗಳಷ್ಟು ದರಗಳನ್ನು ಏರಿಸಲಾಗಿದೆ. ಮೊದಲ **ಒಂದು** ಲಕ್ಷ ಯೂನಿಟ್ ವಿದ್ಯುಚ್ಛಕ್ತಿ ಬಳಕೆಗೆ ಅನ್ವಯವಾಗುವ ಹೊಸ ದರ ರೂ. 6.25 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ. 5.90) ಹಾಗೂ **ಒಂದು** ಲಕ್ಷ ಯೂನಿಟ್ ಮೇಲ್ಪಟ್ಟ ವಿದ್ಯುಚ್ಛಕ್ತಿ ಬಳಕೆಗೆ ಹೊಸದರ ಪ್ರತಿ ಯೂನಿಟ್‌ಗೆ ರೂ. 6.75 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ. 6.30).

ಬೆಸ್ಕಾಂ ವ್ಯಾಪ್ತಿಯ ಇತರೆ ಎಲ್ಲಾ ಪ್ರದೇಶಗಳಲ್ಲಿನ ಮತ್ತು ಇತರೆ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಪ್ರದೇಶಗಳಲ್ಲಿನ ಕೈಗಾರಿಕಾ ಬಳಕೆದಾರರಿಗೆ ಪ್ರತಿ ಯೂನಿಟ್‌ಗೆ 35 ರಿಂದ 45 ಪೈಸೆಗಳಷ್ಟು ದರ ಏರಿಸಲಾಗಿದೆ. ಮೊದಲ ಒಂದು ಲಕ್ಷ ಯೂನಿಟ್ ವಿದ್ಯುಚ್ಛಕ್ತಿ ಬಳಕೆಗೆ ಅನ್ವಯವಾಗುವ ಹೊಸದರ ರೂ. 6.20 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ. 5.85) ಹಾಗೂ ಒಂದು ಲಕ್ಷಕ್ಕಿಂತ ಮೇಲ್ಪಟ್ಟ ವಿದ್ಯುಚ್ಛಕ್ತಿ ಬಳಕೆಗೆ ಹೊಸದರ ಪ್ರತಿ ಯೂನಿಟ್‌ಗೆ ರೂ. 6.60 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ. 6.15).

## ವಾಣಿಜ್ಯ ಬಳಕೆದಾರರಿಗೆ ಅನ್ವಯವಾಗುವ ವಿದ್ಯುಚ್ಛಕ್ತಿ ದರಗಳು:

ಎಲ್.ಟಿ. ವಾಣಿಜ್ಯ ಬಳಕೆದಾರ ಪ್ರವರ್ಗಕ್ಕೆ ಅನ್ವಯವಾಗುವ ಏರಿಕೆ ಪ್ರತಿ ಯೂನಿಟ್‌ಗೆ 20 ಪೈಸೆ. ಬೃಹತ್ ಬೆಂಗಳೂರು ಮಹಾನಗರ ಪ್ರದೇಶ, ಇತರೆ ಮಹಾನಗರ ಪ್ರದೇಶಗಳು ಮತ್ತು ಎಲ್ಲಾ ನಗರ ಪ್ರದೇಶಗಳ ವ್ಯಾಪ್ತಿಯ (Urban Local bodies Areas) ಎಲ್.ಟಿ. ವಾಣಿಜ್ಯ ಬಳಕೆದಾರರಿಗೆ ಹೊಸ ದರಗಳು, ಮೊದಲ 50 ಯೂನಿಟ್‌ಗಳಿಗೆ ರೂ.7.15 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ. 6.95) ಹಾಗೂ ನಂತರದ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.8.15 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ. 7.95).
ಗ್ರಾಮಾಂತರ ಪ್ರದೇಶದಲ್ಲಿನ ವಾಣಿಜ್ಯ ಬಳಕೆದಾರರಿಗೆ ಹೊಸ ದರಗಳು, ಮೊದಲ 50 ಯೂನಿಟ್‌ಗಳಿಗೆ ಪ್ರತಿ ಯೂನಿಟ್‌ಗೆ ರೂ.6.65 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ. 6.45) ಮತ್ತು 50 ಯೂನಿಟ್ ನಂತರದ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.65 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ. 7.45).
ಬೆಸ್ಕಾಂ ವ್ಯಾಪ್ತಿಯ ಬೃಹತ್ ಬೆಂಗಳೂರು ಮಹಾನಗರ ಪ್ರದೇಶ ಹಾಗೂ ಬೆಸ್ಕಾಂ ವ್ಯಾಪ್ತಿಯ ಇತರೆ ಮಹಾನಗರ ಪ್ರದೇಶಗಳಲ್ಲಿನ ಹೆಚ್.ಟಿ.ಕೈಗಾರಿಕಾ ಬಳಕೆದಾರರಿಗೆ ಅನ್ವಯವಾಗುವ ಏರಿಕೆ ಪ್ರತಿ ಯೂನಿಟ್‌ಗೆ 50 ಪೈಸೆ. ಹೊಸ ದರಗಳು, ಮೊದಲ 2 ಲಕ್ಷ ಯೂನಿಟ್‌ಗಳ ಬಳಕೆಗೆ ಪ್ರತಿ ಯೂನಿಟ್‌ಗೆ ರೂ. 8.05 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ. 7.55) ಮತ್ತು 2 ಲಕ್ಷ ಯೂನಿಟ್‌ಗಳ ನಂತರದ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.8.35 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ. 7.85).

ಬೆಸ್ಕಾಂ ವ್ಯಾಪ್ತಿಯ ಇತರೆ ಪ್ರದೇಶಗಳಲ್ಲಿನ ಹಾಗೂ ಇತರೆ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯ ಎಲ್ಲಾ ಪ್ರದೇಶಗಳಲ್ಲಿನ ಹೆಚ್.ಟಿ. ಕೈಗಾರಿಕಾ ಬಳಕೆದಾರರಿಗೆ ಅನ್ವಯವಾಗುವ ಏರಿಕೆ ಪ್ರತಿ ಯೂನಿಟ್‌ಗೆ 50 ಪೈಸೆ. ಹೊಸ ದರಗಳು, ಮೊದಲ 2 ಲಕ್ಷ ಯೂನಿಟ್‌ಗಳ ಬಳಕೆಗೆ ಪ್ರತಿ ಯೂನಿಟ್‌ಗೆ ರೂ. 7.85 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ. 7.35) ಹಾಗೂ 2 ಲಕ್ಷ ಯೂನಿಟ್‌ಗಳ ನಂತರದ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.8.15 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ. 7.65).

## ಕುಡಿಯುವ ನೀರು ಸರಬರಾಜು ಮತ್ತು ಬೀದಿ ದೀಪ:

ಆಯೋಗವು ಕುಡಿಯುವ ನೀರು ಸರಬರಾಜು ಮಾಡುವ ಎಲ್.ಟಿ. ಸ್ಥಾವರಗಳಲ್ಲಿ ಬಳಸಲಾಗುವ ವಿದ್ಯುಚ್ಛಕ್ತಿ ದರವನ್ನು ಪ್ರತಿ ಯೂನಿಟ್‌ಗೆ ಈಗಿರುವ ರೂ.3.40 ರಿಂದ ರೂ. 3.90ಕ್ಕೆ ಪರಿಷ್ಕರಿಸಿ, ಪ್ರತಿ ಯೂನಿಟ್‌ಗೆ 50 ಪೈಸೆಯಷ್ಟು ಏರಿಸಿದೆ. ಹೆಚ್.ಟಿ ಕುಡಿಯುವ ನೀರು ಸರಬರಾಜು ಸ್ಥಾವರಗಳಿಗೆ

ವಿದ್ಯುಚ್ಛಕ್ತಿ ದರವನ್ನು ಪ್ರತಿ ಯೂನಿಟ್‌ಗೆ ಈಗಿರುವ ರೂ.4.10 ರಿಂದ ರೂ.4.50ಕ್ಕೆ ಪರಿಷ್ಕರಿಸಿ, ಪ್ರತಿ ಯೂನಿಟ್‌ಗೆ 40 ಪೈಸೆಯಷ್ಟು ಏರಿಸಿದೆ.

**ಎಲ್.ಇ.ಡಿ. / ಇಂಡಕ್ಷನ್ ಬೀದಿ ದೀಪಗಳಿಗೆ ರಿಯಾಯಿತಿ ವಿದ್ಯುತ್ ದರ:**

ಆಯೋಗವು, ಸ್ಥಳೀಯ ಸಂಸ್ಥೆಗಳು ತಮ್ಮ ಬೀದಿ ದೀಪ ಸ್ಥಾವರಗಳಿಗೆ ಮಿತ ವಿದ್ಯುತ್ ಬಳಸುವ ಎಲ್.ಇ.ಡಿ. / ಇಂಡಕ್ಷನ್ ಬಲ್ಬ್‌ಗಳನ್ನು ಅಳವಡಿಸುವುದನ್ನು ಪ್ರೋತ್ಸಾಹಿಸಲು ಉತ್ತೇಜಿತ ದರ ಪ್ರತಿ ಯೂನಿಟ್‌ಗೆ ರೂ.4.50ಗಳ ಉತ್ತೇಜಿತ ದರವನ್ನು ಮುಂದುವರೆಸಲಾಗಿದೆ. ಇತರೆ ಬೀದಿ ದೀಪ ಸ್ಥಾವರಗಳಿಗೆ ಅನ್ವಯವಾಗುವ ಪರಿಷ್ಕೃತ ದರ ಪ್ರತಿ ಯೂನಿಟ್‌ಗೆ ರೂ.5.50 (ಈಗಿರುವ ದರ ರೂ. 5.00).

## ವಿದ್ಯಾ ಸಂಸ್ಥೆಗಳು ಹಾಗೂ ಆಸ್ಪತ್ರೆಗಳು:

ಆಯೋಗವು, ಎಲ್.ಟಿ. ಪ್ರವರ್ಗಕ್ಕೆ ಸೇರಿದ ಖಾಸಗಿ ವಿದ್ಯಾಸಂಸ್ಥೆಗಳು ಹಾಗೂ ಖಾಸಗಿ ಆಸ್ಪತ್ರೆಗಳಿಗೆ ವಿದ್ಯುಚ್ಛಕ್ತಿ ದರ ಏರಿಸಿದೆ. ಬೃಹತ್ ಬೆಂಗಳೂರು ಮಹಾನಗರ ಪ್ರದೇಶ, ಇತರೆ ನಗರಸಭೆ ಪ್ರದೇಶಗಳು ಹಾಗೂ ನಗರಾಡಳಿತ ಪ್ರದೇಶಗಳ ವ್ಯಾಪ್ತಿಯಲ್ಲಿನ ಎಲ್.ಟಿ. ಪ್ರವರ್ಗದಲ್ಲಿರುವ ಖಾಸಗಿ ವಿದ್ಯಾ ಸಂಸ್ಥೆಗಳಿಗೆ ಹಾಗೂ ಖಾಸಗಿ ಆಸ್ಪತ್ರೆಗಳಿಗೆ, ಮೊದಲ 200 ಯೂನಿಟ್‌ಗಳ ಬಳಕೆಗೆ ಪ್ರತಿ ಯೂನಿಟ್‌ಗೆ ಪರಿಷ್ಕೃತ ದರ ರೂ.6.25 (ಈಗಿರುವ ದರ ಪ್ರತಿ ಯೂನಿಟ್‌ಗೆ 6.00) ಹಾಗೂ ಅದಕ್ಕಿಂತ ಹೆಚ್ಚಿನ ಬಳಕೆಗೆ ಪ್ರತಿ ಯೂನಿಟ್‌ಗೆ ಪರಿಷ್ಕೃತ ದರ ರೂ.7.45 (ಈಗಿರುವ ದರ ಪ್ರತಿ ಯೂನಿಟ್‌ಗೆ 7.20). ಇತರೆ ಎಲ್ಲಾ ಪ್ರದೇಶಗಳಲ್ಲಿ ಸಮಾನ ಬಳಕೆಗೆ ಪರಿಷ್ಕೃತ ದರಗಳ ಪ್ರತಿ ಯೂನಿಟ್‌ಗೆ ರೂ.5.70 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ. 5.50) ಹಾಗೂ ರೂ.6.90 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ. 6.70).

ಹೆಚ್.ಟಿ. ಪ್ರವರ್ಗದಲ್ಲಿ ವಿದ್ಯುಚ್ಛಕ್ತಿ ಪಡೆಯುವ ಸರ್ಕಾರಿ ಆಸ್ಪತ್ರೆಗಳು, ದತ್ತಿ ಸಂಸ್ಥೆಗಳು ನಡೆಸುವ ಆಸ್ಪತ್ರೆಗಳು ಹಾಗೂ ಸರ್ಕಾರಿ ವಿದ್ಯಾ ಸಂಸ್ಥೆಗಳು ಮತ್ತು ಅನುದಾನಿತ ವಿದ್ಯಾ ಸಂಸ್ಥೆಗಳ ಮೊದಲ ಒಂದು ಲಕ್ಷ ಯೂನಿಟ್ ವಿದ್ಯುಚ್ಛಕ್ತಿ ಬಳಕೆಗೆ ಪರಿಷ್ಕೃತ ದರ ಪ್ರತಿ ಯೂನಿಟ್‌ಗೆ ರೂ.6.00 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ. 5.60) ಹಾಗೂ ಒಂದು ಲಕ್ಷ ಯೂನಿಟ್ ನಂತರದ ವಿದ್ಯುಚ್ಛಕ್ತಿ ಬಳಕೆಗೆ ಪರಿಷ್ಕೃತ ದರ ಪ್ರತಿ ಯೂನಿಟ್‌ಗೆ ರೂ.6.50 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ. 6.10).

ಹೆಚ್.ಟಿ ಪ್ರವರ್ಗದಲ್ಲಿ ವಿದ್ಯುಚ್ಛಕ್ತಿ ಪಡೆಯುವ ಖಾಸಗಿ ವಿದ್ಯಾ ಸಂಸ್ಥೆಗಳು ಹಾಗೂ ಖಾಸಗಿ ಆಸ್ಪತ್ರೆಗಳಿಗೆ ಮೊದಲ ಒಂದು ಲಕ್ಷ ಯೂನಿಟ್ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ಅನ್ವಯವಾಗುವ ಪರಿಷ್ಕೃತ ದರ ರೂ.7.00 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ. 6.60) ಹಾಗೂ ಒಂದು ಲಕ್ಷ ಯೂನಿಟ್ ಮೀರಿದ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.50 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ. 7.10).

## ಹಸಿರು ದರ (Green Tariff):

ನವೀಕೃತ ಇಂಧನ ಮೂಲಗಳಿಂದ ಉತ್ಪಾದಿಸುವ ವಿದ್ಯುತ್ ಖರೀದಿ ಮತ್ತು ಉಪಯೋಗವನ್ನು ಉತ್ತೇಜಿಸಲು ಹೆಚ್.ಟಿ. ಕೈಗಾರಿಕೆ ಮತ್ತು ಹೆಚ್.ಟಿ. ವಾಣಿಜ್ಯ ಗ್ರಾಹಕರಿಗೆ ಅವರು ಇಚ್ಛಿಸಿದಲ್ಲಿ ಅನ್ವಯವಾಗುವ ಪ್ರತಿ ಯೂನಿಟ್‌ಗೆ 50 ಪೈಸೆಗಳ ಹಸಿರು ದರವನ್ನು ಮುಂದುವರೆಸಲಾಗಿದೆ.

## ಸರಕಾರದ ಸಹಾಯಧನ:

ಆಯೋಗವು, 2015-16ನೇ ಸಾಲಿನಲ್ಲಿ 10 ಹೆಚ್.ಪಿ.ವರೆಗಿನ ಸಾಮರ್ಥ್ಯದ 25.90 ಲಕ್ಷ ನೀರಾವರಿ ಪಂಪ್‌ಸೆಟ್‌ಗಳಿಗೆ ಹಾಗೂ 29 ಲಕ್ಷ ಭಾಗ್ಯಜ್ಯೋತಿ / ಕುಟೀರ ಜ್ಯೋತಿ ಸಂಪರ್ಕಗಳಿಗಾಗಿ ಉಚಿತ ವಿದ್ಯುತ್ ಸರಬರಾಜಿಗಾಗಿ ರಾಜ್ಯ ಸರ್ಕಾರ ಭರಿಸಬೇಕೆಂದು ನಿಗದಿಪಡಿಸಿದ್ದ ರೂ. 7197 ಕೋಟಿಗಳ ಸಹಾಯಧನದ ಪ್ರತಿಯಾಗಿ 2016-17ನೇ ಸಾಲಿಗೆ ರೂ. 8838 ಕೋಟಿಗಳೆಂದು ಅಂದಾಜಿಸಲಾಗಿದೆ.

2016-17ನೇ ಸಾಲಿನಲ್ಲಿ ನೀರಾವರಿ ಪಂಪ್‌ಸೆಟ್‌ಗಳ ಅಂದಾಜಿತ ಬಳಕೆ 19687 ದಶಲಕ್ಷ ಯೂನಿಟ್‌ಗಳು ಮತ್ತು ಭಾಗ್ಯಜ್ಯೋತಿ / ಕುಟೀರಜ್ಯೋತಿ ಗ್ರಾಹಕರ ಪ್ರವರ್ಗಗಳ ಅಂದಾಜಿತ ಬಳಕೆ 312 ದಶಲಕ್ಷ ಯೂನಿಟ್‌ಗಳು.

## ಇಂಧನವೆಚ್ಚ ಹೊಂದಾಣಿಕೆ ಶುಲ್ಕಗಳು:

ಆಯೋಗವು, 1.7.2013ರಿಂದ ತ್ರೈಮಾಸಿಕವಾಗಿ ಇಂಧನವೆಚ್ಚ ಹೊಂದಾಣಿಕೆ ಶುಲ್ಕಗಳನ್ನು ನಿರ್ಧರಿಸುತ್ತಾ ಬಂದಿದೆ. ಅನ್ವಯವಾಗುವ ಇಂಧನ ವೆಚ್ಚ ಹೊಂದಾಣಿಕೆ ಶುಲ್ಕಗಳನ್ನು ಪ್ರತಿ ತ್ರೈಮಾಸಿಕಕ್ಕೆ ಪ್ರತ್ಯೇಕ ಆದೇಶಗಳನ್ನು ಹೊರಡಿಸುವುದರ ಮುಖಾಂತರ ನಿರ್ಧರಿಸುತ್ತಿದೆ.

## ಅಲ್ಪಾವಧಿ ವಿದ್ಯುತ್ ಖರೀದಿ ದರದ ಮೇಲೆ ಮಿತಿ:

ರಾಜ್ಯದಲ್ಲಿನ ವಿದ್ಯುತ್ ಲಭ್ಯತೆಯಲ್ಲಿನ ಅಭಾವದಿಂದಾಗಿ ವಿದ್ಯುತ್ ಸರಬರಾಜು ಕಂಪನಿಗಳು ಅಲ್ಪಾವಧಿ ಖರೀದಿ ಮಾಡಬೇಕಾಗಿರುವುದನ್ನು ಆಯೋಗವು ಗಮನಿಸಿದೆ. ವಿದ್ಯುತ್ ಸರಬರಾಜು ಕಂಪನಿಗಳಿಗೆ ಆಯೋಗವು, ಈ ಹಿಂದೆ ನಿಗದಿಪಡಿಸಿದ ಪ್ರತಿ ಯೂನಿಟ್‌ಗೆ ರೂ. 4.50ರ ಅಲ್ಪಾವಧಿ ಖರೀದಿ ದರ ಮಿತಿಯನ್ನು ಮುಂದುವರಿಸಿದೆ. ಆಯೋಗ ನಿಗದಿಪಡಿಸಿದ ದರ ಮಿತಿಗಿಂತ ಹೆಚ್ಚಿನ ದರದಲ್ಲಿ ಖರೀದಿ ಮಾಡಲು ವಿದ್ಯುತ್ ಸರಬರಾಜು ಕಂಪನಿಗಳು ಆಯೋಗದ ಪೂರ್ವಭಾವಿ ಅನುಮೋದನೆ ಪಡೆಯಬೇಕಾಗುತ್ತದೆ.

## ವಿದ್ಯುತ್ ಸರಬರಾಜು ಸಂಸ್ಥೆಗಳ 2016–17ನೇ ಸಾಲಿನ ವಾರ್ಷಿಕ ಕಂದಾಯ ಬೇಡಿಕೆ (ARR-FY-17):

ವಿದ್ಯುತ್ ಸರಬರಾಜು ಸಂಸ್ಥೆಗಳು 2016–17ನೇ ಸಾಲಿಗೆ ಸಲ್ಲಿಸಿದ ಕಂದಾಯ ಅರ್ಜಿಗಳ ಕೂಲಂಕುಷ ಪರೀಶೀಲನೆಯ ನಂತರ ಆಯೋಗವು ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳಿಗೆ ಅನ್ವಯವಾಗುವಂತೆ ಒಟ್ಟು ರೂ.31918 ಕೋಟಿ ಖರ್ಚಿಗೆ ಅನುಮೋದನೆ ನೀಡಿದೆ ಮತ್ತು ಸದ್ರಿ ಕಂಪನಿಗಳು ಈ ಸಾಲಿನಲ್ಲಿ 54012 ದಶಲಕ್ಷ ಯೂನಿಟ್‌ಗಳನ್ನು (ಶೇಕಡಾ 17.46ರಷ್ಟು ವಿದ್ಯುತ್ ಪ್ರಸರಣ ಮತ್ತು ವಿತರಣಾ ನಷ್ಟ ಹೊರತುಪಡಿಸಿ) ಸರಬರಾಜು ಮಾಡಲಿವೆ. 2014–15ರ, 59945 ದಶಲಕ್ಷ ಯೂನಿಟ್ ವಿದ್ಯುಚ್ಛಕ್ತಿ ಖರೀದಿಗೆ (2015–16ನೇ ಸಾಲಿನಲ್ಲಿ ಅನುಮೋದನೆಯಾದ ವಿದ್ಯುತ್ ಖರೀದಿ 62623 ದಶಲಕ್ಷ ಯೂನಿಟ್) ಪ್ರತಿಯಾಗಿ, ವಿದ್ಯುತ್ ಸರಬರಾಜು ಕಂಪನಿಗಳ 2016–17ನೇ ಸಾಲಿನಲ್ಲಿ 65439 ದಶಲಕ್ಷ ಯೂನಿಟ್ ವಿದ್ಯುಚ್ಛಕ್ತಿ ಖರೀದಿ ಮಾಡಲಿವೆ. ಒಟ್ಟು ವಿದ್ಯುಚ್ಛಕ್ತಿ ಖರೀದಿಯಲ್ಲಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಸುಮಾರು ಶೇ.48 ಪ್ರಮಾಣದ 31522 ದಶಲಕ್ಷ ಯೂನಿಟ್‌ಗಳನ್ನು ಬಳಸಲಿದೆ ಹಾಗೂ ಆರ್ಥಿಕ ವರ್ಷ 2016–17ಕ್ಕೆ ಈ ಕಂಪನಿಯ ವಾರ್ಷಿಕ ಕಂದಾಯ ಬೇಡಿಕೆ ರೂ. 15765 ಕೋಟಿಯಾಗಿರುತ್ತದೆ.

## ವಿದ್ಯುತ್ ಸರಬರಾಜು ಕಂಪನಿಗಳ ಅನುಮೋದಿತ ವಾರ್ಷಿಕ ಕಂದಾಯ ಬೇಡಿಕೆ:

ಬೆಸ್ಕಾಂ, ಮೆಸ್ಕಾಂ, ಸೆಸ್ಕ್, ಹೆಸ್ಕಾಂ, ಜೆಸ್ಕಾಂ ಮತ್ತು ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ, ಇವುಗಳು ಒಟ್ಟಾರೆ ಕಾರ್ಯಾಚರಣೆ ವೆಚ್ಚಗಳಲ್ಲಿ ಏರಿಕೆ ಮತ್ತು ವಿದ್ಯುತ್ ಖರೀದಿ ವೆಚ್ಚಗಳಲ್ಲಿ ಏರಿಕೆಯಾಗಿದೆ ಎಂದು ಉಲ್ಲೇಖಿಸಿ, 2017–19ರ ಸಾಲುಗಳ ವಾರ್ಷಿಕ ಕಂದಾಯ ಬೇಡಿಕೆಗೆ ಅನುಮೋದನೆ ಕೋರಿ, 2017ನೇ ಸಾಲಿಗೆ ದರಗಳನ್ನು ಪರಿಷ್ಕರಿಸಲು ಪ್ರಸ್ತಾವನೆಗಳನ್ನು ಆಯೋಗಕ್ಕೆ ಸಲ್ಲಿಸಿದ್ದವು. 2017–19ರ ಸಾಲುಗಳ ಪ್ರಸ್ತಾವಿತ ಮತ್ತು ಅನುಮೋದಿತ ವಾರ್ಷಿಕ ಕಂದಾಯ ಬೇಡಿಕೆ (ARR) ಈ ಕೆಳಕಂಡಂತೆ ಇದೆ:

***2017–19ನೇ ಸಾಲಿನ ಪ್ರಸ್ತಾವಿತ ಮತ್ತು ಅನುಮೋದಿತ ವಾರ್ಷಿಕ ಕಂದಾಯ ಬೇಡಿಕೆ***

*(ರೂ. ಕೋಟಿಗಳಲ್ಲಿ)*

| ವಿದ್ಯುತ್ ಸರಬರಾಜು ಪರವಾನಿಗೆದಾರರು | ಆರ್ಥಿಕ ವರ್ಷ 17 | | ಆರ್ಥಿಕ ವರ್ಷ 18 | | ಆರ್ಥಿಕ ವರ್ಷ 19 | |
|---|---|---|---|---|---|---|
| | ಸಲ್ಲಿಸಿರುವುದು | ಅನುಮೋದಿಸಿರುವುದು | ಸಲ್ಲಿಸಿರುವುದು | ಅನುಮೋದಿಸಿರುವುದು | ಸಲ್ಲಿಸಿರುವುದು | ಅನುಮೋದಿಸಿರುವುದು |
| ಬೆಸ್ಕಾಂ | 17556.47 | 15764.97 | 18616.93 | 15714.23 | 19994.61 | 16989.34 |
| ಮೆಸ್ಕಾಂ | 3090.52 | 2773.95 | 3579.72 | 2936.04 | 3833.47 | 3179.54 |
| ಸೆಸ್ಕ್ | 3778.37 | 3382.14 | 4220.19 | 3748.89 | 4638.30 | 4149.52 |
| ಹೆಸ್ಕಾಂ | 7112.32 | 6017.97 | 8297.99 | 6405.89 | 9634.88 | 7075.73 |
| ಜೆಸ್ಕಾಂ | 4378.72 | 3978.56 | 5181.84 | 4488.36 | 5723.76 | 4856.24 |
| ಹುಕ್ಕೇರಿ ಆರ್.ಇ.ಸಿ.ಎಸ್. | 151.92 | 118.49 | 177.47 | 136.67 | 206.04 | 149.07 |
| **ಒಟ್ಟು** | **36068.32** | **32036.08** | **40074.14** | **33430.08** | **44031.06** | **36399.44** |

## ಆರ್ಥಿಕ ವರ್ಷ 2017ರ ಕಂದಾಯ ಕೊರತೆ:

ಆರ್ಥಿಕ ವರ್ಷ 2015ರ ವಾರ್ಷಿಕ ಕಾರ್ಯ ನಿರ್ವಹಣಾ ಪುನರ್ಮನನದಲ್ಲಿ ಆಯೋಗವು ರೂ. 331 ಕೋಟಿ ಕಂದಾಯ ಹೆಚ್ಚಳವನ್ನು ನಿರ್ಧರಿಸಿದೆ. ಆರ್ಥಿಕ ವರ್ಷ 2017ರ ವಾರ್ಷಿಕ ಕಂದಾಯ ಬೇಡಿಕೆಯಂತೆ, ಹೆಚ್ಚುವರಿ ಕಂದಾಯ ಬೇಡಿಕೆ ರೂ. 1812 ಕೋಟಿಗಳು. ಆದ್ದರಿಂದ, ಆರ್ಥಿಕ ವರ್ಷ 2017ರಲ್ಲಿನ ಒಟ್ಟು ಕಂದಾಯ ಕೊರತೆ ರೂ.2586 ಕೋಟಿ.

## ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ 2016–17ಕ್ಕೆ ಅನ್ವಯವಾಗುವ ವಿದ್ಯುತ್ ಪ್ರಸರಣ ದರ:

ಆಯೋಗವು 2015ರ ವಾರ್ಷಿಕ ಕಾರ್ಯ ನಿರ್ವಹಣಾ ಪುನರ್ಮನನದ ನಂತರ, ಹಿಂದಿನಿಂದ ಮುಂದುವರೆಸಿದ ಕೊರತೆ ರೂ. 203 ಕೋಟಿಗಳನ್ನು ಸೇರಿಸಿದಂತೆ 2017ನೇ ಸಾಲಿಗೆ ರೂ. 3093 ಕೋಟಿ ವಾರ್ಷಿಕ ಕಂದಾಯ ಬೇಡಿಕೆಯನ್ನು ಅನುಮೋದಿಸಿದೆ. 2015–16ರಲ್ಲಿನ ಪ್ರತಿ ಮೆಗಾವಾಟ್‌ಗೆ ಪ್ರತಿ ತಿಂಗಳಿಗೆ ಪ್ರಸರಣಾದರವಾದ ರೂ. 112079/–ಕ್ಕೆ ಪ್ರತಿಯಾಗಿ, 2016–17ಕ್ಕೆ ಕೆ.ಪಿ.ಟಿ.ಸಿ.ಎಲ್.ಗೆ ಪಾವತಿ ಮಾಡಬೇಕಾದ ಪರಿಷ್ಕೃತ ಪ್ರಸರಣಾ ದರ ಪ್ರತಿ ಮೆಗಾವಾಟ್‌ಗೆ ಪ್ರತಿ ತಿಂಗಳಿಗೆ

ರೂ. 127400/-. ವಿದ್ಯುತ್ ಸರಬರಾಜು ಸಂಸ್ಥೆಗಳಿಗೆ ಆಯೋಗ ಅನುಮೋದಿಸಿರುವ ವಿದ್ಯುತ್ ಖರೀದಿ ವೆಚ್ಚದಲ್ಲಿ ಮತ್ತು ದರ ಪರಿಷ್ಕರಣೆಯಲ್ಲಿ 2016-17ನೇ ಸಾಲಿನ ಪರಿಷ್ಕೃತ ವಿದ್ಯುತ್ ಪ್ರಸರಣಾದರವನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

**ಮಂಗಳೂರು ಮತ್ತು AEQUS ವಿಶೇಷ ಆರ್ಥಿಕ ವಲಯ (SEZ)ಗಳಿಗೆ ವಾರ್ಷಿಕ ಕಂದಾಯ ಬೇಡಿಕೆ (ARR) ಮತ್ತು ವಿದ್ಯುಚ್ಛಕ್ತಿ ದರ ನಿರ್ಧರಣೆ:**

ಆಯೋಗವು, ಮಂಗಳೂರು ವಿಶೇಷ ಆರ್ಥಿಕ ವಲಯಕ್ಕೆ ರೂ. 54.83 ಕೋಟಿಗಳ ಮತ್ತು AEQUS ವಿಶೇಷ ಆರ್ಥಿಕ ವಲಯಕ್ಕೆ ರೂ. 9.98 ಕೋಟಿಗಳ ವಾರ್ಷಿಕ ಕಂದಾಯ ಬೇಡಿಕೆಯನ್ನು ನಿರ್ಧರಿಸಿದೆ. ಆಯೋಗವು, ಆರ್ಥಿಕ ವರ್ಷ 2017ನೇ ಸಾಲಿಗೆ ಮಂಗಳೂರು **SEZ** ಮತ್ತು **AEQUS SEZ** ಗಳಲ್ಲಿನ ಕೈಗಾರಿಕಾ ಗ್ರಾಹಕರಿಗೆ ಚಿಲ್ಲರೆ ವಿದ್ಯುತ್‌ದರವನ್ನು (Retail Supply Tariff) ಪ್ರತಿ ಯೂನಿಟ್‌ಗೆ ಕ್ರಮವಾಗಿ ರೂ. 6.50 ಮತ್ತು ರೂ. 6.55ಗಳೆಂದು ನಿಗದಿಪಡಿಸಿದೆ.

*****

**ಟಿಪ್ಪಣಿ: ಪ್ರತಿ ಬಳಕೆದಾರರ ಪ್ರವರ್ಗಕ್ಕೆ ಸಂಬಂಧಿಸಿದ ಪರಿಷ್ಕೃತ ವಿದ್ಯುತ್‌ದರ ವಿವರಗಳನ್ನು ಲಗತ್ತಿಸಿದೆ ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಮತ್ತು ವಿದ್ಯುತ್ ಸರಬರಾಜು ಕಂಪನಿಗಳು ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ, MSEZ, AEQUS SEZಗಳಿಗೆ ಸಂಬಂಧಿಸಿದ ದರ ಪರಿಷ್ಕರಣ ಆದೇಶಗಳ ಸಂಪೂರ್ಣ ವಿವರಗಳನ್ನು ಆಯೋಗದ ವೆಬ್‌ಸೈಟ್WWW.Karnataka.gov.in/kerc ನಲ್ಲಿ ಪ್ರಕಟಿಸಲಾಗಿದೆ**